ದಿನಾಂಕ 04-11-2023 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಸ್.ಆರ್ ವಕೀಲರಿಂದ ಶ್ರೀ ಜಿ.ಪಿ.ಎಸ್ ವಕೀಲರ ಪರವಾಗಿ**

1) ಈಗ ನಾನು ಮಕ್ಕಳಕಟ್ಟೆಯಲ್ಲಿ ವಾಸವಾಗಿದ್ದೇನೆ. ಈಗ ನಾನು ದಿನಗೂಲಿ ಮೇಲೆ ಬಣ್ಣಹಚ್ಚುವ ಕೆಲಸವನ್ನು ಕಳೆದ 4 ವರ್ಷಗಳಿಂದ ಮಾಡುತ್ತಿದ್ದೇನೆ.

2) ನಾನು 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸ ಮಾಡಿರುತ್ತೇನೆ. ನಾನು 2013 ರಿಂದ 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸ ಮಾಡಿರುತ್ತೇನೆ. 2013 ರಲ್ಲಿ ನಾನು 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

3) ನಾನು ದಿನಗೂಲಿ ಆಧಾರದ ಮೇಲೆ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನನಗೆ ಪ್ರತಿದಿನ ರೂಪಾಯಿ 380 ದಿನಗೂಲಿ ಕೊಡುತ್ತಿದ್ದರು. ದಿನಗೂಲಿಯನ್ನು ಪ್ರತೀವಾರದ ಕೊನೆಗೆ ಒಟ್ಟಿಗೆ ಕೊಡುತ್ತಿದ್ದರು. ಸದರಿ ಕಾರ್ಖಾನೆಯಲ್ಲಿ 45 ರಿಂದ 70 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಎಲ್ಲಾ ಕಾರ್ಮಿಕರಿಗೆ ಪ್ರತಿದಿನ ಕೆಲಸ ಇರುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಕೆಲಸ ಒತ್ತಡಕ್ಕೆ ಅನುಗುಣವಾಗಿ ಆಯಾ ದಿನ ಹೇಳಿದವರು ಮಾತ್ರ ಕೆಲಸಕ್ಕೆ ಬರುತ್ತಿದ್ದರು. ಕಾರ್ಖಾನೆಯ ಕೆಲಸಕ್ಕೆ ಬರದವರು ಬೇರೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ಕಾರ್ಖಾನೆಯ ಕೆಲಸ ಇರದೇ ಇದ್ದಲ್ಲಿ ಬೇರೆ ಕಡೆ ಕೆಲಸ ಮಾಡಬಹುದಾಗಿತ್ತು.

4) ನನ್ನ ಮನೆಯಿಂದ ಕಾರ್ಖಾನೆ 4 ಕಿ.ಮೀ ಅಂತರದಲ್ಲಿ ಇರುತ್ತದೆ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಮಾಸಿಕ ರೂಪಾಯಿ 11,250.00 ಸಂಬಳ ಬರುತ್ತಿತ್ತು ಎಂದು ತೋರಿಸುವ ಯಾವುದೇ ದಾಖಲೆ ಹಾಜರುಮಾಡಿರುವುದಿಲ್ಲ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನ್ನ ತಿಳುವಳಿಕೆಯಲ್ಲಿ ಇರುತ್ತದೆ. ದಿನಾಂಕ 19-08-2013 ರಿಂದ 08-07-2019 ರವರೆಗೆ ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಕಾರ್ಖಾನೆಯಲ್ಲಿ ತೆಂಗಿನಕಾಯಿ ತೊಳೆಯುವ ಕೆಲಸ ಮಾಡುತ್ತಿದ್ದೆನು. ಕಾಯಿ ತೊಳೆಯುವ ಕೆಲಸ ಇರದೇ ಇದ್ದಾಗ ನನಗೆ ಬೇರೆ ಸ್ವಚ್ಛ

ಮಾಡುವ ಕೆಲಸ ಕೊಡುತ್ತಿದ್ದರು.

5) 2 ನೇ ಪಕ್ಷಗಾರ ಕಾರ್ಖಾನೆಯು ಯಾವ ಕಾರಣಕ್ಕೆ ಮುಚ್ಚಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಿಚಾರಿಸಿದಾಗ ಕಾರ್ಖಾನೆಯವರು ಏಕೆ ಮುಚ್ಚಿದ್ದೇವೆ ಎಂದು ಹೇಳಿರುವುದಿಲ್ಲ. ನಾನು ಕಾರ್ಖಾನೆ ಮುಚ್ಚುವ ಕಾಲಕ್ಕೆ ಕೆಲಸ ಮಾಡದೇ ಇದ್ದ ಕಾರಣ ಯಾವ ಕಾರಣಕ್ಕೆ ಕಾರ್ಖಾನೆ ಮುಚ್ಚಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆಯವರು ನಮ್ಮನ್ನು ವಜಾ ಮಾಡಿರುವುದಿಲ್ಲ. ನಾನು ಸ್ವತಃ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ. ನಾನು ಕಾರ್ಮಿಕ ಇಲಾಖೆಗೆ ಯಾವ ದಿನಾಂಕದಂದು ಮತ್ತು ಯಾವ ಸಾಲಿನಲ್ಲಿ ಅರ್ಜಿ ಕೊಟ್ಟಿದ್ದೇನೆ ಎಂದು ಹೇಳಲು ಬರುವುದಿಲ್ಲ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಬರೆದಿರುವ ವಿಷಯ ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಓದು ಬರೆಯಲು ಬರುತ್ತಿದ್ದು ನಾನೇ ಅರ್ಜಿ ಬರೆದುಕೊಟ್ಟಿದ್ದೇನೆ. ನಾನು ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಕಾರ್ಖಾನೆಯವರು ನನನ್ನು ಕೆಲಸದಿಂದ ವಜಾ ಮಾಡಿರುವುವರು ಎಂದು ಉಲ್ಲೇಖ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಗಲೇ ಅದರ ಉತ್ಪಾದನೆ ನಿಲ್ಲಿಸಿದ್ದರಿಂದ ನನ್ನ ಕೆಲಸ ಹೋಗಿ ಆದಾಯ ನಿಂತಿರುತ್ತದೆ ಆ ಕಾರಣದಿಂದ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ.

6) ಕೆಲಸ ಇದ್ದಾಗ ಮಾತ್ರ 2 ನೇ ಪಕ್ಷಗಾರ ಕಾರ್ಖಾನೆಯವರು ನನ್ನನ್ನು ಕೆಲಸಕ್ಕೆ ಕರೆಯುತ್ತಿದ್ದರು ಮತ್ತು ಕೆಲಸ ಇರದೇ ಇದ್ದಾಗ ಕರೆಯುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಮಿಕನಿರದ ಕಾರಣ ಕಾರ್ಖಾನೆಯವರು ನನಗೆ ಭವಿಷ್ಯ ನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆಯ ಸದಸ್ಯನಾಗಿ ಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ಭವಿಷ್ಯ ನಿಧಿ ಹೊಂದಿದ ಬಗ್ಗೆ ದಾಖಲೆ ಹಾಜರು ಮಾಡಿರುವುದಿಲ್ಲ. ನಾನು ಕಾರ್ಮಿಕ ವಿಮಾ ಯೋಜನೆಯ ದಾಖಲೆ ಹಾಜರುಪಡಿಸಿದ್ದೇನೆ. ನಾನು ಕಾರ್ಮಿಕ ವಿಮಾ ಯೋಜನೆಯ ದಾಖಲೆ ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

7) ನಾನು ನನ್ನ ಫೋಟೋ ಇರುವ ಕಾರ್ಮಿಕ ವಿಮಾ ಯೋಜನೆಯ ಪುಸ್ತಕ ಎನ್ನುವ ದಾಖಲೆ ಹಾಜರುಪಡಿಸಿದ್ದೇನೆ. ಸದರಿ ದಾಖಲೆಯಲ್ಲಿ ಅದು ಕಾರ್ಮಿಕ ವಿಮಾ

ಯೋಜನೆಗೆ ಸಂಬಂಧಪಟ್ಟಿದ್ದು ಎಂದು ಉಲ್ಲೇಖ ಇರುವುದಿಲ್ಲ . ನಾನು 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ನನಗೆ ಭವಿಷ್ಯ ನಿದಿ ಮತ್ತು ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯವನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನಾನು 2 ನೇ ಪಕ್ಷಗಾರ ಕಾರ್ಖಾನೆಯ ಕಾರ್ಮಿಕನಿರದ ಕಾರಣ ಅದನ್ನು ಮುಚ್ಚುವಾಗ ನನಗೆ ನೋಟಿಸು ಕೊಡುವ ಯಾವುದೇ ಅವಶ್ಯಕತೆ ಇಲ್ಲ ಎನ್ನುವುದು ಸರಿಯಲ್ಲ. ನಾನು ಕೇಳುವ 3 ತಿಂಗಳ ಸಂಬಳ ಕೊಡುವ ಜವಾಬ್ದಾರಿ ಕಾರ್ಖಾನೆಯವರಿಗೆ ಇಲ್ಲ ಎನ್ನುವುದು ಸರಿಯಲ್ಲ.

8) 2019 ರಲ್ಲಿ 2 ನೇ ಪಕ್ಷಗಾರ ಕಾರ್ಖಾನೆ ನಷ್ಟವಿದ್ದ ಕಾರಣ ಮುಚ್ಚಿ ಹೋಗಿತ್ತು ಎನ್ನುವುದು ಸರಿಯಲ್ಲ. ಸದರಿ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿತ್ತು ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚುವ ಕಾಲಕ್ಕೆ ನಾನು ಅಲ್ಲಿಯೇ ಕೆಲಸ ಮಾಡುತ್ತಿರದ ಕಾರಣ ಅದು ನಷ್ಟದಲ್ಲಿ ಇತ್ತು ಎಂದು ನನಗೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯವರಿಗೆ ಸಂಪರ್ಕಿಸಿ ಕೆಲಸ ಕೊಡು ಎಂದು ಕೇಳಿಯೇ ಇಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚಿದ ಬಗ್ಗೆ ತಿಳಿದ ನಂತರ ಅಕ್ರಮವಾಗಿ ದುರ್ಲಾಭ ಪಡೆಯಲೆಂದು ನಾನು ಈ ಅರ್ಜಿ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಬೇರೆಯವರ ಕುಮ್ಮಕ್ಕಿನಿಂದ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆ ಮುಚ್ಚಿದ ಸಮಯದಲ್ಲಿ ಕೆಲಸ ಮಾಡದೇ ಇದ್ದ ಕಾರಣ ಮತ್ತು ಕಾರ್ಮಿಕನಿರದ ಕಾರಣ 3 ತಿಂಗಳ ಸಂಬಳ ಪಡೆಯುವ ಯಾವುದೇ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯುವ ಅರ್ಹತೆ ನನಗೆ ಇಲ್ಲ ಎನ್ನುವುದು ಸರಿಯಲ್ಲ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳು ಇರುತ್ತದೆ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯಿಂದ ಎಲ್ಲಾ ಸೌಲಭ್ಯ ಪಡೆದಿರುವ ಕಾರಣ ಹಾಗೂ ನಿರಂತರ ಕಾರ್ಮಿಕನಿರದ ಕಾರಣ ನನಗೆ ಗ್ರಾಚ್ಯುಟಿ ಪಡೆಯವ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ.

9) ನಿಪಿ-10 ನ್ನು ನನ್ನ ಮಾಹಿತಿಯನ್ನು ಪೂರೈಸಲು ನಾನು ಕಾರ್ಖಾನೆಗೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ಅದು ನಷ್ಟದಲ್ಲಿ ನಡೆಯುತ್ತಿತ್ತು ಎನ್ನುವ ಬಗ್ಗೆ ಗೊತ್ತಾಗಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯ ಎಂದೂ ಕೆಲಸ ಮಾಡದೇ ಇದ್ದ ಕಾರಣ ನನಗೆ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ನಾನು ಬಹಳ ವರ್ಷಗಳ ಹಿಂದೆಯೇ ಕಾರ್ಖಾನೆಯ ಕೆಲಸಕ್ಕೆ ರಾಜೀನಾಮೆ ಕೊಟ್ಟು ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯ ಕಾರ್ಮಿಕನಿರದ ಕಾರಣ ನನಗೆ ಭವಿಷ್ಯ ನಿಧಿ , ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯವನ್ನು ಕೊಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. ನಾನು ಭವಿಷ್ಯ ನಿಧಿ ಮತ್ತು ಕಾರ್ಮಿಕ ವಿಮಾ ಯೋಜನೆಯ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ/ಕಾರ್ಮಿಕ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ, ಉಡುಪಿ